# ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರಕಾರದ ಉದ್ಯಮ)

**ಹೊಯ್ಗೆಬಜಾರ್, ಮಂಗಳೂರು-575001.**

E-Mail: kfdcixe@yahoo.com — ದೂರವಾಣಿ : (ಕಛೇರಿ) 2421281/2

Website: www.kfdcfish.karnataka.gov.in — ಫ್ಯಾಕ್ಸ್(0824) 2424560


**ಕ್ರಮಾಂಕ:ಕಮೀಅನಿನಿ/ಆಡಳತ/1/2023-24** — **ದಿನಾಂಕ: 07.03.2024**

**ಕಲ್ಯಾಣ-ಕರ್ನಾಟಕ ಪ್ರದೇಶಕ್ಕೆ ಮೀಸಲಿರಿಸಿದ ಹುದ್ದೆಗಳ ನೇಮಕಾತಿ**

ಭಾರತೀಯ ಸಂವಿಧಾನದ ಅನುಚ್ಛೇಧ 371(ಜೆ)ಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ತಿದ್ದುಪಡಿ ಆದೇಶ 2013ರ ಕಂಡಿಕೆ-13(ಐ)ನಂತೆ ರಾಜ್ಯ ಮಟ್ಟದ ಸಂಸ್ಥೆಯಾದ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರು ಇದರ ಅಧಿಸೂಚನೆ ಸಂಖ್ಯೆ:ಕಮೀಅನಿನಿ/ಸಿಬ್ಬಂದಿ/ಹೈ.ಕ.ಅಭಿವೃದ್ಧಿ/2013-14ದಿನಾಂಕ:29.04.2015ರನ್ವಯ ಕಲ್ಯಾಣ-ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವ್ಯಕ್ತಿಗಳಿಗೆ ಲಭ್ಯವಿರುವ 'ಸಿ' ವೃಂದದ 1 ಹುದ್ದೆಯನ್ನು ಕೆಳಕಂಡಂತೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ | ಹುದ್ದೆಗಳ ವರ್ಗೀಕರಣ | | ಒಟ್ಟು ಹುದ್ದೆಗಳು | ವೇತನ ಶ್ರೇಣಿ |
|---|---|---|---|---|---|---|
| | | | ಸಾಮಾನ್ಯ/ ಇತರ | ಮಹಿಳೆ | | |
| 1. | ಕಿರಿಯ ಮಾರಾಟ ಸಹಾಯಕರು | ಪಿ.ಯು.ಸಿ ಉತ್ತೀರ್ಣತೆ ಮತ್ತು ಮಾರಾಟ ಮಾಡುವಲ್ಲಿ ಅನುಭವದ ಜೊತೆಗೆ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. | 1 | - | 1 | 21400-42000 |
| | ಒಟ್ಟು | | 1 | - | 1 | |

**1.ವಯೋಮಿತಿ:** ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನದಂದು ಅಭ್ಯರ್ಥಿಯು ಕೆಳಗೆ ಕಾಣಿಸಿದ ವಯೋಮಿತಿ ಹೊಂದಿರತಕ್ಕದ್ದು.

1. ಸಾಮಾನ್ಯ ವರ್ಗ - ಕನಿಷ್ಠ - 18 ವರ್ಷ ಗರಿಷ್ಠ - 35 ವರ್ಷ

2. **ಅರ್ಜಿ ಶುಲ್ಕ:** ಶುಲ್ಕ ರೂ.500.00 ಮೊತ್ತದ ಕ್ರಾಸ್ ಮಾಡಿದ ಡಿಮಾಂಡ್ ಡ್ರಾಫ್ಟನ್ನು Managing Director, Karnataka Fisheries Development Corporation Ltd., Mangalore ಇವರ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ಲಗತ್ತಿಸುವುದು.

3. **ಅರ್ಜಿ ನಮೂನೆ:** ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ನಿಗಮದ ವೆಬ್‌ಸೈಟ್ www.kfdcfish.karnataka.gov.in ನಿಂದ download ಮಾಡಿಕೊಳ್ಳುವುದು. ಇಲ್ಲವೇ ಅರ್ಜಿಗಳನ್ನು ನಿಗಮದ ಕೇಂದ್ರ ಕಚೇರಿಯಲ್ಲಿ ಕಚೇರಿ ಅವಧಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಪಡೆಯಬಹುದು.

4. **ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸುವುದು.**

i) ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಕ್ಕೆ ಸಹಿ ಮಾಡಿ ಲಗತ್ತಿಸಬೇಕು.

ii) ಜನ್ಮ ದಿನಾಂಕ, ಅಂಕಪಟ್ಟಿಗಳು ಹಾಗೂ ಜಾತಿ ಪ್ರಮಾಣ ಪತ್ರದ ನಕಲುಗಳನ್ನು ಗಜೆಟೆಡ್ ಅಧಿಕಾರಿಗಳ ದೃಡೀಕರಣದೊಂದಿಗೆ ಲಗತ್ತಿಸುವುದು.

iii) ಕಲ್ಯಾಣ-ಕರ್ನಾಟಕ ಭಾಗದ ಬಳ್ಳಾರಿ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್ ಮತ್ತು ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದಅನುಚ್ಛೇಧ 371(ಜೆ)ರನ್ವಯ ನೇರ ನೇಮಕಾತಿಗೆ ಆ ಭಾಗದ 7 ಜಿಲ್ಲೆಗಳ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಸದ್ರಿ ಹುದ್ದೆಗಳಿಗೆ ಆ ಭಾಗದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

iv) ಸದ್ರಿ ಮೇಲಿನ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಈ ಕೆಳಗಿನ ಪ್ರಮಾಣ ಪತ್ರಗಳನ್ನು ಹೊಂದಿರಬೇಕು.

1) ಅರ್ಹತಾ ಪ್ರಮಾಣ ಪತ್ರ(ಅನುಚ್ಛೇಧ 371(ಜೆ) ಮೇರೆಗೆ)

2) ವಾಸ ಸ್ಥಳ ಪ್ರಮಾಣ ಪತ್ರ

3)ವ್ಯಾಸಂಗ ಪ್ರಮಾಣ ಪತ್ರ.

4) ವಿವಾಹ ಪ್ರಮಾಣ ಪತ್ರ

5) ಸ್ವಗ್ರಾಮ (ಅಥವಾ ಸ್ಥಳ) ಪ್ರಮಾಣ ಪತ್ರ ಅಥವಾ

6) ವಾರಸ ಪ್ರಮಾಣ ಪತ್ರ ಅಥವಾ

7) ಈ ಮೇಲಿನ ಪ್ರಮಾಣ ಪತ್ರಗಳ ಒಂದು ಅಥವಾ ಹೆಚ್ಚಿನ ಸಂಯೋಜನೆ

ಮೇಲಿನ ಪ್ರಮಾಣ ಪತ್ರಗಳ ಯಥಾ ಪ್ರತಿಗಳನ್ನು ಸಕ್ಷಮ ಅಧಿಕಾರಿಗಳ ದೃಡೀಕರಣದೊಂದಿಗೆ ಅರ್ಜಿಯೊಂದಿಗೆ ಲಗ್ತೀಕರಿಸುವುದು.

v) ಅಭ್ಯರ್ಥಿಯು ಈಗಾಗಲೇ ಯಾವುದಾದರೂ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಸಂಸ್ಥೆಯ ಮುಖ್ಯಸ್ಥರ ಮೂಲಕ ಅರ್ಜಿ ಸಲ್ಲಿಸಬೇಕು.

vi) ಗುಣ ನಡತೆಯ ಬಗ್ಗೆ ಶಿಕ್ಷಣ ಸಂಸ್ಥೆ ಮುಖ್ಯಸ್ಥರಿಂದ ಹಾಗೂ ಇತರೆ ಇಬ್ಬರು ಗಜೆಟೆಡ್ ಅಧಿಕಾರಿಗಳಿಂದ ಪ್ರಮಾಣಪತ್ರ ಪಡೆದು ಲಗತ್ತಿಸಬೇಕು.

vii) ಲಕೋಟೆಯ ಮೇಲೆ ಅರ್ಜಿ ಸಲ್ಲಿಸಿರುವ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಬೇಕು.

viii) ಭರ್ತಿ ಮಾಡಿದ ನಿಗದಿತ ನಮೂನೆಯ ಅರ್ಜಿ ಫಾರಂ ಅನ್ನು ಮೇಲೆ ತಿಳಿಸಿರುವ ದಾಖಲೆಗಳೊಂದಿಗೆ Managing Director, Karnataka Fisheries Development Corporation Ltd., Hoige Bazar, Mangalore-575001 ಇವರಿಗೆ ದಿನಾಂಕ: 06.04.2024 ರ ಸಂಜೆ 5.30ರೊಳಗಾಗಿ ಅಂಚೆ ಮೂಲಕ,

ಕೊರಿಯರ್ ಮೂಲಕ ಇಲ್ಲವೇ ಮುದ್ದಾಂ ಆಗಿ ತಲುಪಿಸಬೇಕು. ವಿಳಂಬವಾಗಿ ಸ್ವೀಕರಿಸಿದ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

5. **ನೇಮಕಾತಿ ವಿಧಾನ:** ಆಯ್ಕೆಯನ್ನು ಅರ್ಹತೆ (Merit) ಮತ್ತು ಸಂದರ್ಶನದ ಆಧಾರದ ಮೇಲೆ ಮಾಡಲಾಗುವುದು.
6. ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳನ್ನು ನಿಗಮದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರು

## ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳು

1. ಕಲ್ಯಾಣ-ಕರ್ನಾಟಕ ಭಾಗದ ಬಳ್ಳಾರಿ, ಕೊಪ್ಪಳ, ರಾಯಚೂರು, ಕಲಬುರಗಿ, ಯಾದಗಿರಿ, ಬೀದರ್ ಮತ್ತು ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇಧ 371(ಜೆ)ರನ್ವಯ ನೇರ ನೇಮಕಾತಿಗೆ ಆ ಭಾಗದ 7 ಜಿಲ್ಲೆಗಳ ಅಭ್ಯರ್ಥಿಗಳಿಗೆ ಮೀಸಲಿರಿಸಲಾಗಿದೆ. ಸದ್ರಿ ಹುದ್ದೆಗಳಿಗೆ ಆ ಭಾಗದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
2. ತತ್ಸಬಂಧ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಿಯಮಾನುಸಾರ ಸಂಬಂಧಿಸಿದ ಪ್ರಾಧಿಕಾರದಿಂದ ಅನೆಕ್ಷರ್ 'ಎ' ನಲ್ಲಿ ಅರ್ಹತಾ ಪ್ರಮಾಣ ಪತ್ರ ಹೊಂದಿರತಕ್ಕದ್ದು.
3. ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.
4. ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ನಿಗಮದ ವೆಬ್‌ಸೈಟ್ **www.kfdcfish.karnataka.gov.in** ನಿಂದ Download ಮಾಡಿಕೊಳ್ಳುವುದು. ಅರ್ಜಿಗಳನ್ನು ನಿಗಮದ ಕೇಂದ್ರ ಕಚೇರಿಯಲ್ಲಿ ಕಚೇರಿ ಅವಧಿಯಲ್ಲಿ ರಜಾ ದಿನಗಳನ್ನು ಹೊರತುಪಡಿಸಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ **ದಿನಾಂಕ: 06.04.2024 ರ ಸಂಜೆ 5.30ರೊಳ**ಗಾಗಿ ಅಂಚೆ ಮೂಲಕ, ಕೊರಿಯರ್ ಮೂಲಕ ಇಲ್ಲವೇ ಮುದ್ದಾಂ ಆಗಿ ತಲುಪಿಸಬೇಕು.
5. ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
6. ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ನೇಮಕಾತಿ ಪ್ರಾಧಿಕಾರ/ಇಲಾಖಾ ಮುಖ್ಯಸ್ಥರ ಮುಖಾಂತರ ಅರ್ಜಿಯನ್ನು ಸಲ್ಲಿಸುವುದು.
7. ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವೊಂದನ್ನು ಅರ್ಜಿಯ ಬಲಗಡೆ ಮೇಲ್ಭಾಗದಲ್ಲಿ ಅಂಟಿಸಬೇಕು.
8. ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಚಾರ ಅಥವಾ ಶಿಫಾರಸ್ಸುಗಳನ್ನು ಮಾಡಿದರೆ ಅಂಥವರ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಅರ್ಜಿದಾರರೊಡನೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
10. ಮೇಲಿನ ಹುದ್ದೆಗಳಿಗೆ ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರುರವರು ಕಾಯ್ದಿರಿಸಿಕೊಂಡಿರುತ್ತಾರೆ.
11. 500/- ರೂ.ಗಳ ಬ್ಯಾಂಕ್ ಡಿ.ಡಿ.ಯನ್ನು **ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರು**ರವರ ಹೆಸರಿಗೆ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಡಿ.ಡಿ.ಗಳನ್ನು ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಮಾತ್ರ ಖರೀದಿಸತಕ್ಕದ್ದು. **ಹಾಗೂ ಡಿ.ಡಿ.ಯ ಹಿಂದೆ ಹೆಸರು ಮತ್ತು ವಿಳಾಸವನ್ನು ನಮೂದಿಸತಕ್ಕದ್ದು.** ಡಿ.ಡಿ.ಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
12. ಸಹಿ ಮಾಡದಿರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
13. **ಆಯ್ಕೆಯನ್ನು ಅಭ್ಯರ್ಥಿಯ ಮೆರಿಟ್ ಮೇಲೆ ಮಾತ್ರ ಪರಿಗಣಿಸಲಾಗುವುದು.**
14. ನೇಮಕಾತಿ ವಿಧಾನ:- ಆಯ್ಕೆಯನ್ನು ಅರ್ಹತೆ (Merit) ಆಧಾರದ ಮೇಲೆ ಶೇಕಡಾ 75 ಅಂಕ ಹಾಗೂ ಸಂದರ್ಶನಕ್ಕೆ ಶೇಕಡಾ 25 ಅಂಕ ನಿಗದಿಪಡಿಸಿ ಆಯ್ಕೆಮಾಡಲಾಗುವುದು.
15. ರಾಜ್ಯದ ವಿವಿಧ ಭಾಗಗಳಲ್ಲಿರುವ ನಿಗಮದ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಲು ಒಪ್ಪಿಗೆ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸುವುದು.

16. ಅಂಚೆ ವಿಳಂಬಕ್ಕೆ ನಿಗಮವು ಜವಾಬ್ದಾರರಾಗುವುದಿಲ್ಲ.

17.ಕೆಳಕಂಡ ದಾಖಲೆಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿದೆಯೇ ಎಂದು ಖಚಿತ ಪಡಿಸಿಕೊಳ್ಳುವುದು.

- ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿ, ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ಇತರೆ ತತ್ಸಮಾನ ವಿದ್ಯಾರ್ಹತೆ ಪ್ರಮಾಣ ಪತ್ರಗಳ ಯಥಾ ಪ್ರತಿಯನ್ನು ಗಜೆಟೆಡ್ ಅಧಿಕಾರಿಗಳ ದೃಢೀಕರಣದೊಂದಿಗೆ ಲಗ್ತೀಕರಿಸುವುದು. ಒಂದು ವೇಳೆ ಆಯ್ಕೆಯಾದ ಅಭ್ಯರ್ಥಿ ಮೂಲ ಪ್ರತಿ ನೀಡುವಾಗ ವ್ಯತ್ಯಾಸ ಕಂಡು ಬಂದಲ್ಲಿ ಆಯ್ಕೆಯನ್ನು ರದ್ದುಗೊಳಿಸಲಾಗುವುದು.
- ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ.ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆಯ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
- ಸ್ವಗ್ರಾಮ ಪ್ರಮಾಣ ಪತ್ರ(ಅನುಚ್ಛೇಧ 371(ಜೆ) ಮೇರೆಗೆ)
- ಅರ್ಹತಾ ಪ್ರಮಾಣ ಪತ್ರ(ಅನುಚ್ಛೇಧ 371(ಜೆ) ಮೇರೆಗೆ)
- ವಾಸ ಸ್ಥಳ ಪ್ರಮಾಣ ಪತ್ರ
- ವ್ಯಾಸಂಗ ಪ್ರಮಾಣ ಪತ್ರ.
- ವಿವಾಹ ಪ್ರಮಾಣ ಪತ್ರ

ಮೇಲ್ಕಂಡಂತೆ ನಿಗದಿಪಡಿಸಿದ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

18. ಇತರೆ ಸೂಚನೆಗಳು:

1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಪೋಟೋ ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

2) ಅಭ್ಯರ್ಥಿಗಳು ವಿಳಾಸದೊಂದಿಗೆ ದೂರವಾಣಿ ಸಂಖ್ಯೆಯನ್ನು ನಮೂದಿಸುವುದು.

3) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟಿದ್ದರೆ ಆ ದಿನಾಂಕದ ಮಾರನೆಯ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿ., ಮಂಗಳೂರು

## ಅರ್ಜಿ ನಮೂನೆ

| | | |
|---|---|---|
| 1. ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ | : | ಭಾವಚಿತ್ರಕ್ಕೆ ಸಹಿ ಮಾಡಿ ಲಗತ್ತಿಸುವುದು |
| 2. ಹುದ್ದೆಯ ಹೆಸರು | : | |
| 3. ಅಭ್ಯರ್ಥಿಯ ಪೂರ್ಣ ಹೆಸರು(ದಪ್ಪ ಅಕ್ಷರಗಳಲ್ಲಿ) | : | |
| 4. ತಂದೆಯ ಹೆಸರು/ಗಂಡನ ಹೆಸರು | : | |
| 5. ಲಿಂಗ | : | |
| 6. ಜಾತಿ | : | |
| 7. ಜನ್ಮ ದಿನಾಂಕ | : | |
| 8. ವಿದ್ಯಾರ್ಹತೆ(ಶೇಕಡಾವಾರು ಗಳಿಸಿದ ಅಂಕಗಳು) | : | |
| 9. ಅಂಚೆ ವಿಳಾಸ (ದೂರವಾಣಿ ಸಂಖ್ಯೆ ಸಹಿತ) | : | |
| 10.ಖಾಯಂ ವಿಳಾಸ | : | |
| 11. ಹಾಲಿ ಸೇವೆಯಲ್ಲಿದ್ದ ವಿವರ (ಅನುಮತಿ ಪತ್ರದೊಂದಿಗೆ) | : | |
| 12.ಲಗತ್ತಿಸಿದ ಅರ್ಜಿ ಶುಲ್ಕ ವಿವರ (ಬ್ಯಾಂಕ್ ಹೆಸರು, ಡಿ.ಡಿ.ಸಂಖ್ಯೆ/ದಿನಾಂಕ) | : ರೂ. | |

## ಘೋಷಣಾ ಪತ್ರ

ಈ ಅರ್ಜಿಯಲ್ಲಿ ನೀಡಿದ ಮಾಹಿತಿಗಳು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ ಮತ್ತು ಯಾವುದೇ ಹಂತದಲ್ಲಿ ಇವು ಅಸತ್ಯ ಎಂದು ಕಂಡು ಬಂದಲ್ಲಿ ಅಥವಾ ವಾಸ್ತವಾಂಶಗಳನ್ನು ಮುಚ್ಚಿಡಲು ಉದ್ದೇಶಪೂರ್ವಕವಾಗಿ ನಾನು ಪ್ರಯತ್ನಿಸಿದ್ದೇನೆ ಎಂದು ಕಂಡು ಬಂದಲ್ಲಿ ನನ್ನ ಅಭ್ಯರ್ಥಿತನವನ್ನು ತಕ್ಷಣ ನಿರಾಕರಿಸಬಹುದಾಗಿದೆ ಹಾಗೂ ಸಂಸ್ಥೆಯ ಸೇವೆಯಲ್ಲಿದ್ದಲ್ಲಿ ಸದರಿ ಸೇವೆಯಿಂದ ನನ್ನನ್ನು ವಜಾಗೊಳಿಸಬಹುದಾಗಿದೆ.

ದಿನಾಂಕ:

ಸ್ಥಳ :

ಅಭ್ಯರ್ಥಿಯ ಸಹಿ/ಮತ್ತು ಹೆಸರು